**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 45/2019 .

ಪ್ರಾ.ಸಾ.ಃ2
ಚಾ.ಸಾ.ಃ6

ಹೆಸರು ಃ ನಿಶಾನ್
ತಂದೆಯ ಹೆಸರು ಃ ಲೇಟ್ ಸಿ ಬಿ ಮುತ್ತಣ್ಣ
ವಯಸ್ಸು ಃ 44 ವರ್ಷ
ಉದ್ಯೋಗ ಃ ಫುಡ್ ಇನ್ಸ್ ಪೆಕ್ಟರ್
ವಿಳಾಸ ಃ ನಲ್ವತೋಕ್ಲು

... ........................................................................................................ ...

ದಿನಾಂಕ 21 ನೇ ನವೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ ಃ -

ನಾನು 2015 ರಿಂದ 2019 ರಲ್ಲಿ ಹುದಿಕೇರಿಯಲ್ಲಿ ರೆವಿನ್ಯೂ ಇನ್ಸ್ಪ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸರ್ವೆ ನಂ. 176/4 ಜಮೀನು ಯಾರ ಹೆಸರಿನಲ್ಲಿದೆ ಎಂದು ಶ್ರೀಮಂಗಲ ಪೊಲೀಸರು ನನ್ನನ್ನು ಕೇಳಿರುತ್ತಾರೆ. ಅದರಂತೆ ನೆಲ್ಲೀರ ರಾಜೇಂದ್ರರವರ ಹೆಸರಿನಲ್ಲಿ ಸರ್ವೆ ನಂ. 176/4 ಇದೆ ಎಂದು ನಾನು ವರದಿ ನೀಡಿರುತ್ತೇನೆ.

ನಾನು ನೀಡಿದ ವರದಿಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3 ಎ ಎಂದು, ಪಹಣಿಯನ್ನು ನಿಪಿ 4 ಎಂದು ಗುರುತಿಸಲಾಯಿತು. ಈ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ 1 ರವರಿಂದ

ಪೊಲೀಸರು ಸರ್ವೆ ನಂ. 176/4 ಬಗ್ಗೆ ಮಾಹಿತಿ ಕೇಳಿ ನನಗೆ ಲಿಖಿತವಾಗಿ ನೊಟೀಸ್ ನೀಡಿದ್ದಾರೆ ಎನ್ನುತ್ತಾರೆ. ನಾನು 2015 ರಿಂದ ಹುದಿಕೇರಿಯಲ್ಲಿ 2017 ರತನಕ ಗ್ರಾಮ ಲೆಕ್ಕಿಗರಾಗಿ, 2018 ರಿಂದ 2020 ರತನ ಆರ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. 2010 ರಲ್ಲಿ ರಾಜೇಂದ್ರ ರವರ ಹೆಸರಿಗೆ ಸರ್ವೆ ನಂ. 176/4 ರ ಪಹಣಿ ಆಗಿರುತ್ತದೆ. ನಾನು ಸರ್ವೆ ನಂ. 176/4 ಅನ್ನು ಸ್ಥಳಕ್ಕೆ ಹೋಗಿ ಪರಿಶೀಲಿಸಿರುತ್ತೇನೆ. ನಾನು ಯಾವ ದಿನಾಂಕದಂದು ಸದರಿ ಜಮೀನಿಗೆ ಹೋಗಿ ಪರಿಶೀಲಿಸಿದ್ದೇನೆ ಎಂದು ನೆನಪಿಲ್ಲ. ನನ್ನ ಜೊತೆಗೆ ಸರ್ವೆಯರ್ ಹಾಗೂ ಗ್ರಾಮ ಲೆಕ್ಕಿಗರು ಬಂದಿದ್ದರು. ನಾವು ಸರ್ವೆ ನಂ. 176/4 ಅನ್ನು ಅಳತೆ ಮಾಡಲಿಲ್ಲ ಆದರೆ ಸದರಿ ಜಮೀನು ಯಾರಿಗೆ ಸೇರಿದ್ದು ಎಂಬ ಬಗ್ಗೆ ಸರ್ವೆಯರ್ ಬಳಿ ಕೇಳಿ ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ. ಪಹಣಿಯನ್ನು ನೋಡಿ 1 ಎಕರೆ 45 ಸೆಂಟ್ ಎಂದು ನನ್ನ ವರದಿಯಲ್ಲಿ ನಮೂದಿಸಿದ್ದೇನೆ ಆದರೆ ಜಮೀನನ್ನು

ಅಳತೆ ಮಾಡಿರುವುದಿಲ್ಲ ಎನ್ನುತ್ತಾರೆ. ಸರ್ವೆ ನಂ. 176/4 ರಲ್ಲಿ ಕಾಫಿ ಗಿಡ ಒಂದೂ ಸಹ ಇಲ್ಲ ಎಂದರೆ ಸರಿಯಲ್ಲ, ಸ್ವಲ್ಪ ಭಾಗದಲ್ಲಿ ಕಾಫಿ ತೋಟ ಹಾಗೂ ಸ್ವಲ್ಪ ಭಾಗದಲ್ಲಿ ಕಾಫಿ ಕಣ ಇದೆ ಎನ್ನುತ್ತಾರೆ. ಸ್ವಲ್ಪ ಭಾಗದಲ್ಲಿ ಇರುವ ಕಾಫಿ ತೋಟ, ಮನೆ, ಬಾವಿ ನಾಣಯ್ಯನವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ.ಅಲ್ಲಿ ಮನೆ ಹಾಗೂ ಬಾವಿ ಇರಲಿಲ್ಲ ಎನ್ನುತ್ತಾರೆ. ನಾನು ಹೇಳಿದಂತೆ ಸರ್ವೆ ನಂ. 176/4 ರಲ್ಲಿ ಸುಮಾರು ಅರ್ಧ ಎಕರೆಗಿಂತ ಕಡಿಮೆ ಜಾಗ ಇದೆ 1 ಎಕರೆ 45 ಸೆಂಟ್ ಜಾಗ ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ pumping station with 5 HP water pumping machine ಇತ್ತು ಎಂದರೆ ಸರಿಯಲ್ಲ. ಸುಮಾರು 20 ವರ್ಷಗಳಿಂದ ಸದರಿ pumping machine ಅಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಪಹಣಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ಪರಿಶೀಲಿಸಿರುವುದಿಲ್ಲ ಎನ್ನುತ್ತಾರೆ. ನಾವು ಸ್ಥಳಕ್ಕೆ ಹೋದಾಗಲೂ ಸಹ ಸರ್ವೆ ನಂ. 176/4 ರ ಯಾವುದೇ ಕಡತವನ್ನು ತೆಗೆದುಕೊಂಡು ಹೋಗಿರಲಿಲ್ಲ ಎನ್ನುತ್ತಾರೆ. ನಾನು ಹುದಿಕೇರಿ ಹೋಬಳಿಯಲ್ಲಿದ್ದಾಗ ಸರ್ವೆ ನಂ. 176/4 ರ ಜಮೀನಿನ ದಾಖಲಾತಿಯನ್ನು ವಜಾಗೊಳಿಸಲು ಆರೋಪಿ 1 ಆದ ನಾನು ಅರ್ಜಿ ನೀಡಿದ್ದೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ 2 ರವರ ಪರ ವಕೀಲರಿಂದ</u>

ನಾನು ಸ್ಥಳಕ್ಕೆ ಹೋದಾಗ ಜಿಪಿಎಸ್ ಮಾಡಿರುವುದಿಲ್ಲ ಹಾಗೂ ಫೋಟೋ ತೆಗೆದಿರುವುದಿಲ್ಲ. ನಾನು ಸ್ಥಳದಲ್ಲಿ ಯಾವುದೇ ಮಹಜರ್ ಬರೆಯಲಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಪರಿಶೀಲಿಸಿಲ್ಲ ಆದ ಕಾರಣ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ-</u> ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)
ಒದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

sd/-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.